41. Gorbal
42. Arabhavi H.
43. Shindikurber
44. Naganoor
45. Kunnur
46. Khadaklat
47. Akkol
48. Navilihal
49. Delkud
50. Nainglaz
51. Hambalwad
52. Benadi
53. Chikkalwad
54. Boragaon
55. Sidnal
56. Yelihalgalli
57. Parihanaballi
58. Ainapur
59. Shiraguppi
60. Jugal
61. Mangawathi
62. Nesargi
63. Naginahal
64. Doddwad
65. M.K. Hubli
66. Sampagaon
67. Sanikoppa
68. Hole Hosur
69. Ampadegatti

**ಸಂಕೇಶ್ವರ ಕ್ಷೇತ್ರದ ಪಂಚಾಯತಿಗಳಲ್ಲಿ ಹಣವನ್ನು ಉಪಯೋಗ ಮಾಡುವ ವಿಧಾನ**

1016 - ಶ್ರೀ ಪಾಟೀಲ ಕಾಕಾ ಸಾಹೇಬ ಪಾಂಡುರಂಗ (ನಿಪ್ಪಾಣಿ) : ಮಾನ್ಯ ಗ್ರಾ.ಅ. ಮತ್ತು ಪಂ.ರಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸಂಕೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಪಂಚಾಯತಿಗಳಲ್ಲಿ ಪಂಚಾಯತಿಯಿಂದ ಮತ್ತು ಜಿಲ್ಲಾ ಪಂಚಾಯತಿಯಿಂದ ಹಾಗೂ ಸರ್ಕಾರದಿಂದ ಮಂಜೂರಾಗಿರುವ ಹಣದಲ್ಲಿ ಶೇ. 18ರಷ್ಟು ಹಣವನ್ನು ಯಾವ ಯಾವ ಜನಾಂಗಕ್ಕೆ ಖರ್ಚು ಮಾಡಲಾಗಿದೆ?*

*ಆ) ಪ್ರತಿಯೊಂದು ಪಂಚಾಯತಿಯಲ್ಲಿ ಶೇ. 18ರಷ್ಟು ಹಣವನ್ನು ಖರ್ಚು ಮಾಡಿರುವ ವಿವರವೇನು?*

*ಇ) 1999ರಲ್ಲಿ ಪ್ರತಿಯೊಂದು ಪಂಚಾಯತಿಯಿಂದ ಶೇ. 18 ಗ್ರಾಂಟ್ ಖರ್ಚು ಮಾಡಿರುವ ವಿವರ ಮತ್ತು ಅವರಿಗೆ ಕೊಟ್ಟಿರುವ ಖರ್ಚುಗಳ ವಿವರಗಳೇನು?*

*ಈ) ಖರ್ಚು ಮಾಡದೇ ಇರುವ ಪಂಚಾಯತಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಸಂಕೇಶ್ವರ ಮತ ಕ್ಷೇತ್ರದ 28 ಗ್ರಾಮ ಪಂಚಾಯತಿಗಳಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಪಂಗಡದ ಜನರ ಕಲ್ಯಾಣಕ್ಕಾಗಿ ರೂ. 5,41,529.00ಗಳನ್ನು ಖರ್ಚು ಮಾಡಲಾಗಿದೆ.

ಆ) ಈ ಹಣವನ್ನು ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ಜನರಿಗೆ ಮನೆ, ಚರ ಒಲೆ ಇತ್ಯಾದಿಗಳನ್ನು ಒದಗಿಸಲು ಖರ್ಚು ಮಾಡಲಾಗಿದೆ.

ಇ) ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ವೈಯಕ್ತಿಕ ಫಲಾನುಭವಿಗಳಿಗೆ ಮನೆ ಒದಗಿಸಲು ರೂ. 4,02,204 ಗಳನ್ನು ಖರ್ಚು ಮಾಡಲಾಗಿದೆ ಮತ್ತು ಒಟ್ಟು 27 ಮನೆಗಳನ್ನು ನಿರ್ಮಿಸಲಾಗಿದೆ. ಸುಮಾರು 1.5 ಲಕ್ಷ ರೂಪಾಯಿಗಳನ್ನು ಚುಲ್ಲಾ ಒದಗಿಸಲು ಖರ್ಚು ಮಾಡಲಾಗಿದೆ. ಇದಲ್ಲದೆ ಕುಡಿಯುವ ನೀರು ಒದಗಿಸಲು, ಭಾವಿ ಆಳಮಾಡುವುದಕ್ಕೂ ಸಹ ಕ್ರಮ ತೆಗೆದುಕೊಳ್ಳಲಾಗಿರುತ್ತದೆ.

ಈ) ಈ ಬಗ್ಗೆ ಯಾವುದೇ ವರದಿಯಾಗಿರುವುದಿಲ್ಲ. ಆದರೂ, ಎಲ್ಲಾ ಪಂಚಾಯತಿಗಳು ನಿಗದಿತ ಅವಧಿಯಲ್ಲಿ ಅನುದಾನವನ್ನು ವಿನಿಯೋಗಿಸುವ ಬಗ್ಗೆ ಕಟ್ಟುನಿಟ್ಟಿನ ನಿರ್ದೇಶನಗಳನ್ನು ನೀಡಲಾಗಿದೆ.

## ಮುಂಡರಗಿ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳು ಹಾಗೂ ಸಿಬ್ಬಂದಿ ನೇಮಕ

1017 - ಶ್ರೀ ಪಾಟೀಲ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಗದಗ ಜಿಲ್ಲೆಯ ಮುಂಡರಗಿ ಕ್ಷೇತ್ರದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ? ಹಾಗೂ ಎಷ್ಟು ಕಮ್ಯುನಿಟಿ ಹೆಲ್ತ್ ಸೆಂಟರ್‌ಗಳಿವೆ? ಅವುಗಳಿಗೆ ಡಾಕ್ಟರ್‌ಗಳ ಹಾಗೂ ಇತರೆ ಎಲ್ಲಾ ಸಿಬ್ಬಂದಿಯವರುಗಳನ್ನು ಸಂಪೂರ್ಣವಾಗಿ ನೇಮಿಸಲಾಗಿದೆಯೆ?*

*ಆ) ಮುಂಡರಗಿ ಮತಕ್ಷೇತ್ರಗಳಲ್ಲಿ ಆಯುರ್ವೇದ ಮತ್ತು ಹೋಮಿಯೋಪತಿ ಆಸ್ಪತ್ರೆಗಳು ಎಷ್ಟಿವೆ? ಅವುಗಳಿಗೆ ಡಾಕ್ಟರುಗಳ ಹಾಗೂ ಇತರೆ ಎಲ್ಲಾ ವರ್ಗದ ಸಿಬ್ಬಂದಿಯವರುಗಳನ್ನು ಸಂಪೂರ್ಣವಾಗಿ ನೇಮಿಸಲಾಗಿದೆಯೇ?*

ಡಾ॥ ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮುಂಡರಗಿ ಮತಕ್ಷೇತ್ರಕ್ಕೆ 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 1 ಕಮ್ಯುನಿಟಿ ಹೆಲ್ತ್ ಸೆಂಟರ್ ಇರುತ್ತವೆ. ಇವುಗಳಿಗೆ ಸಂಪೂರ್ಣವಾಗಿ ವೈದ್ಯರು ಮತ್ತು ಇತರೆ ಸಿಬ್ಬಂದಿಯನ್ನು ಪೂರ್ಣವಾಗಿ ನೇಮಿಸಿರುವುದಿಲ್ಲ.